ವೇದ್ಯವಾಯಿತು. ಒಂದು ಸಂಜೆಯ ನಲುಮಾತಿನ ನಡುವೆ ನನ್ನ ಹೆಂಡತಿ, 'ಎಲ್ಲಿ ಈ ಸರ್ತಿ ಹಬ್ಬ ನಿಂತುಹೋಗುತ್ತೋ ಅಂತ ಯೋಚನೆಯಾಗಿತ್ತು... ವರ್ಷಕ್ಕೊಂದು ಸಲ ಬರೋ ಹಬ್ಬ. ಗಂಡಸಿಲ್ಲದೆ ಏನಂತ ವ್ರತ ಮಾಡೋದು?!' ಅಂತಂದು, ರಾಜಿಯ ಮರ್ಮವನ್ನು ಹೊರಬಿಟ್ಟಳು. ಅಬ್ಬಾ ಹುನ್ನಾರವೇ!!

ಚೌತಿಹಬ್ಬ ಕಳೆದು ಹನ್ನೊಂದನೇ ದಿವಸಕ್ಕೆಲ್ಲ ಪಕ್ಷಮಾಸ ಸುರುವಾಯಿತು. ಈ ಹೊತ್ತಿಗೆ ಸರಿಯಾಗಿ ಈಶ್ವರಿಯ ಗಂಡನ ಕಡೆಯ ದಾಯಾದಿಯೊಬ್ಬರು ತೀರಿಕೊಂಡರೆಂದು ಸುದ್ದಿ ಬಂತು. ದಿಟವಾದ ಕಟು ಕರ್ಮಠ ಫಜೀತಿಯೊಂದು ನನ್ನ ಒಳಮನೆಯಲ್ಲಿ ಏರ್ಪಟ್ಟಿತು. ಗಂಡನ ದಾಯಾದಿಯೆಂದ ಮೇಲೆ ಈಶ್ವರಿಗೆ ಹತ್ತು ದಿವಸದ ಸೂತಕ ತಾನೇ? ಅವಳ ಕೈಯಡುಗೆ ಉಣ್ಣುವಂತಿಲ್ಲ! ಈಗೇನು ಮಾಡುವುದು? ವಯಸ್ಸಾದ ನನ್ನಮ್ಮನಿಗೆ ಸೌಟು ಹಿಡಿಯುವಷ್ಟು ತ್ರಾಣವಿಲ್ಲ; ನನ್ನ ಹೆಂಡತಿಗೆ ಒಲೆಯೆದುರು ನಿಂತೇ ಗೊತ್ತಿಲ್ಲ! ದೇವರೇ ಇನ್ನೇನು ಗತಿ?! 'ಏನೂ ಪರವಾಗಿಲ್ಲ, ಈಶ್ವರೀ... ದಿನಾ ತಲೆಗೊಂದು ಚೆಂಬು ನೀರು ಹುಯಕೊಂಡು ಬಂದು ಅಡುಗೆ ಮಾಡು...' ಅಮ್ಮ ಪರಿಸ್ಥಿತಿಗೆ ರಾಜಿಯಾಗುವಂತೆ ಹೇಳಿದಳು. ಇದನ್ನು ಕೇಳಿಸಿಕೊಂಡ ನಮ್ಮ ತಪೋವರ ಎಲ್ಲಿದ್ದನೋ ಏನೋ, ಫಕ್ಕನೆ, 'ಈ ಅಮ್ಮ ಮಾಡಿದ ಅಡುಗೆ ನಾನು ತಿನ್ನಲ್ಲ!' ಎಂದಂದುಬಿಟ್ಟ!! ಅಮ್ಮನ ಗುಂಡಿಗೆಯೇ ಕುಸಿದು ವಿಲವಿಲಿಸಿತು. 'ಯಾಕೋ, ತಪಸ್ಸು... ಹಾಗಂತೀ? ತಲೆಗೆ ಸ್ನಾನ ಮಾಡಿದ ಮೇಲೆ ಶುದ್ಧಿ ಕಣೋ...' ಎಂದು ಪೂಸಿ ಹೊಡೆದಳು. 'ಮಾಜೀ... ಹಾಗಲ್ಲ. ಪಿತೃಪಕ್ಷದಲ್ಲಿ ನೀವೂ ಇನ್ನೊಬ್ಬರ ಕೈಯಡುಗೆ ತಿನ್ನಬಾರದೂ... ನರಕಕ್ಕೆ ಹೋಗುತೀರಿ...' ಎಂದು, ತಪಸ್ಸು ಪುರಾತನ ಶಾಸ್ತ್ರವೊಂದರ ಪಟ್ಟಿಟ್ಟು ಹೇಳಿದ. ಅಮ್ಮ, 'ನೀನಾದರೂ ಹೇಳೋ, ಅವನಿಗೆ...' ಎಂದು ನನ್ನತ್ತ ನೋಡಿದಳು!

ಇಷ್ಟೆಲ್ಲದರ ನಡುವೆ ತಲೆಯ ಮೇಲೆ ಸಮಸ್ತ ಆಕಾಶದೊಡನೆ ಅಷ್ಟೂ ಸಮಸ್ತ ದೇವರುಗಳನ್ನೂ ಹೊತ್ತು ಕುಳಿತಿದ್ದ ನನ್ನ ಹೆಂಡತಿಯನ್ನು ನೋಡಿ ನಾನು ನಕ್ಕೆ. ಕೆಂಡಾಮಂಡಲ ಉರಿದಳು!

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ಬೆಂಗಳೂರಿನಲ್ಲಿ ನೆಲೆಸಿರುವ ವಸ್ತಾರೆ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಯೋಗ ನಿರತರು.